**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯಾಲಯ</u>**

**<u>ಅಫಜಲಪೂರ</u>**

**ಸಿ.ಸಿ. ನಂ.303/2018**

**ರೇವೂರ ಪೋಲಿಸ ಠಾಣೆ**

॥ ವಿರುದ್ಧ ॥

**ರಾಮಪ್ಪ ದೊಡಮನಿ**

# <u>ಃಆರೋಪಣೆಃ</u>

ರಾಮಪ್ಪ ತಂದೆ ದೊಡಮನಿ
ವಯಸ್ಸುಃ43-ವರ್ಷ, ಉದ್ಯೋಗಃ ಚಾಲಕ/ನಿರ್ವಾಹಕ
ಸಾ. ಐ.ಬಿ.ಹತ್ತಿರ ತಾಳಿಕೋಟೆ, ತಾ.ಮುದ್ದೇಬಿಹಾಳ

ಶ್ರೀ **ಅಶೋಕ .ಟಿ,** ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅಫಜಲಪುರ. ಆರೋಪಿಸುವುದೇನೆಂದರೆ,

ಮೊದಲನೇಯದಾಗಿ ದಿನಾಂಕ 12.10.2017 ರಂದು ಸಾಯಂಕಾಲ 6.00 ಗಂಟೆ ಸಮಯದಲ್ಲಿ ಆರೋಪಿಯಾದ ನೀನು ಬಸ್ ನಂ.ಕೆಎ-35/10 (ಹೊಸಪೇಟೆ-ಘತ್ತರಗಾ) ನ್ನು ಅತೀವೇಗ ಹಾಗೂ ನಿರ್ಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುಂತೆ ಚಲಾಯಿಸಿ, ಅಫಜಲಪೂರ-ಕಲಬುರಗಿ ಮುಖ್ಯ ರಸ್ತೆಯ ಮೇಲೆ ಆತನೂರ ಸೀಮಾಂತರದ ನಬಿಲಾಲ ನಾಕೇದಾರ ರವರ ಹೊಲದ ಹತ್ತಿರ ಚಾಸಾ-1 ರವರ ಚಿಕ್ಕಪ್ಪನಾದ ನಾಗಣ್ಣ ತಂದೆ ಶರಣಪ್ಪ ರಟಕಲ್ ಹಾಗೂ ಚಿಕ್ಕಮ್ಮಳಾದ ಮಹಾದೇವಿ ಗಂಡ ನಾಗಣ್ಣ ರಟಕಲ್ ರವರು ತಮ್ಮ ಎತ್ತಿನಬಂಡಿಯಲ್ಲಿ ಕುಳಿತು ಹೊಲದಿಂದ ಮನೆಗೆ ಬರುತ್ತಿದ್ದಾಗ, ಹಿಂದುಗಡೆಯಿಂದ ಬಂದು ಎತ್ತಿನ ಬಂಡಿಗೆ ಡಿಕ್ಕಿ ಹೊಡೆದು ಅಪಘಾತಪಡಿಸಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ279 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಯಾದ ನೀನು ಬಸ್ ನಂ.ಕೆಎ-35/ಎಫ್-10 ನ್ನು ಅತೀವೇಗ ಹಾಗೂ ನಿರ್ಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುಂತೆ ಚಲಾಯಿಸಿ, ಚಾಸಾ-1 ರವರ ಚಿಕ್ಕಪ್ಪನಾದ ನಾಗನಣ್ಣ ತಂದೆ ಶರಣಪ್ಪ ರಟಕಲ್ ಹಾಗೂ ಚಿಕ್ಕಮ್ಮಳಾದ ಮಹಾದೇವಿ ಗಂಡ ನಾಗಣ್ಣ ರಟಕಲ್ ರವರು ತಮ್ಮ ಎತ್ತಿನಬಂಡಿಯಲ್ಲಿ ಕುಳಿತು ಹೋಗುತ್ತಿರುವಾಗ ಹಿಂದಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸಿ, ಸದರಿಯವರಿಗೆ ಕೈಕಾಲುಗಳಿಗೆ ತರಚಿದ ಗಾಯ ಹಾಗೂ ತಲೆಗೆ ಭಾರಿ ರಕ್ತಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಡುವಂತೆ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ304(ಎ) ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಯಾದ ನೀನು ಬಸ್ ನಂ.ಕೆಎ-35/ಎಫ್-10 ನ್ನು ಅತೀವೇಗ ಹಾಗೂ ನಿರ್ಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುಂತೆ ಮೇಲ್ಕಂಡಂತೆ ಆಪಘಾತಪಡಿಸಿದ ನಂತರ ಸದರಿ ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆ ಕೊಡಿಸದೇ ಸ್ಥಳದಲ್ಲಿಯೇ ಬಸ್ಸನ್ನು ಬಿಟ್ಟು ಓಡಿ ಹೋಗಿ ಆ ಮೂಲಕ ಮೋಟಾರ ವಾಹನ ಕಾಯ್ದೆ ಕಲಂಃ187 ರಡಿಯಲ್ಲಿ ಅಪರಾಧವನ್ನು ಆ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ದಿನಾಂಕಃ 15.02.2020 ಜೆ.ಎಮ್.ಎಫ್.ಸಿ, ಅಫಜಲಪೂರ

## ಆರೋಪಿಯ ಹೇಳಿಕೆ

ಪ್ರ-1 ಮೇಲೆ ಓದಿ ಹೇಳಲಾದ ಅರೋಪಣೆ ಅರ್ಥವಾಯಿತೆ?
ಉಃ

ಪ್ರ-2 ತಪ್ಪನ್ನು ಒಪ್ಪಿಕೊಳ್ಳುವೀಯಾ ಅಥವಾ ವಿಚಾರಣೆ ಬಯಸುತ್ತೀಯಾ?
ಉಃ

ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಆರೋಪಣೆಗಳನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅತನು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ

ದಿನಾಂಕಃ 15.02.2020 ಜೆ.ಎಮ್.ಎಫ್.ಸಿ, ಅಫಜಲಪೂರ